ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದಕ್ಕೆ ತಕ್ಷಣವಂತೂ ಯಾವುದನ್ನೂ ಏನು ಮಾಡಲು ಬರುವುದಿಲ್ಲ. ಕೆರೆಯದನ್ನೂ ಕೂಡ; ಮಳೆ ಕಡಿಮೆಯಾದ ಮೇಲಾದರೂ ದುರಸ್ತಿ ಮಾಡಬೇಕು ಇಲ್ಲದಿದ್ದರೆ ಸ್ವಲ್ಪವಾದರೂ ಕೆಲಸ ಮಾಡಬೇಕಾದರೂ ಬೇಕಲ್ಲಾ? ಇವರು ಹೇಳಿದ್ದು ಏನೆಂದರೆ, ಯಾವುದಾದರೂ ತಕ್ಷಣ ಉಸುಕಿನ ಚೀಲವನ್ನು ಹಾಕಿ ನಿಲ್ಲಿಸತಕ್ಕ ಸಾಧ್ಯತೆ ಇದ್ದರೆ ಅದನ್ನು ಮಾಡೋಣ. ತಮ್ಮಲ್ಲೂ ಕೂಡ ಅದೆ ಪರಿಸ್ಥಿತಿ ಇತ್ತು ಎಂದರೆ, ಫ್ಲಡ್ ರಿಲೀಫ್ ಫಂಡ್‌ನಲ್ಲಿ ಇರತಕ್ಕ ದುಡ್ಡನ್ನು ತಕ್ಷಣ ಬಿಡುಗಡೆ ಮಾಡುವುದಕ್ಕೆ ಹೇಳಿ, ಅದರ ಮೂಲಕ ಅದನ್ನು ದುರಸ್ತಿ ಮಾಡತಕ್ಕಂಥದನ್ನು ಮಾಡೋಣ.

ಶ್ರೀ ಹೆಚ್. ಹಾಲಪ್ಪ: ಶಿವಮೊಗ್ಗ ಜಿಲ್ಲೆಯ ಮುರ್ನಾಕು ತಾಲ್ಲೂಕುಗಳಲ್ಲಿ, ಮಲೆನಾಡಿನ ಎಲ್ಲಾ ಭಾಗದಲ್ಲೂ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾವುದೇ ಜಿಲ್ಲೆ ಇರಲಿ. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇಂಥ ಪರಿಸ್ಥಿತಿ ಇದೆ.

ಶ್ರೀ ಹೆಚ್. ಹಾಲಪ್ಪ: ರಾಜ್ಯದಲ್ಲಿ ಅದರಲ್ಲೂ ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಜಾಸ್ತಿ ಮಳೆ ಆಗಿರುವುದರಿಂದ . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೌದು, ನಿಮ್ಮ ಜಿಲ್ಲೆಯಲ್ಲೆ ಭಾರಿ ಮಳೆಯಾಗಿದೆ, ಟಿ.ವಿ.ಯಲ್ಲೂ ತೋರಿಸುತ್ತಿದ್ದಾರೆ. ತಾವು ನೋಡಿದ್ದಿರೋ ಇಲ್ಲವೋ, ಸಾಕಷ್ಟು ಕಡೆ ಡ್ಯಾಮೇಜ್ ಆಗಿದೆ, ಹೆಚ್ಚಿನ ಮಳೆ ಬರುತ್ತಿದೆ ಎನ್ನತಕ್ಕದ್ದನ್ನು ನಾನು ನೋಡಿದೆ, ಅದಕ್ಕೆ ಫ್ಲಡ್ ರಿಲೀಫ್‌ನಲ್ಲೂ ಕೂಡ ತಕ್ಷಣ ಹಣ ಬಿಡುಗಡೆ ಮಾಡುವುದಕ್ಕೆ ಮುಖ್ಯಮಂತ್ರಿಯವರಿಗೆ ಈಗ ಮಾತನಾಡುತ್ತೇನೆ. ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೂ ಹೇಳುತ್ತೇನೆ, ಅವರ ಹತ್ತಿರ ಫ್ಲಡ್ ರಿಲೀಫ್‌ಗೆ ದುಡ್ಡು ಇರುತ್ತದೆ, ತಕ್ಷಣ ಬಿಡುಗಡೆ ಡೆಪ್ಯುಟಿ ಕಮೀಷನರ್‌ಗಳಿಗೆ ಮಾಡಬೇಕು, ರಿಪೋರ್ಟ್ ತರಿಸಿಕೊಂಡು ಆಮೇಲೆ ಬೇಕಾದರೆ ಹೆಚ್ಚಿನ ಹಣ ಬೇಕಾದರೆ ಕೊಡಲಿ, ತಕ್ಷಣ ಈಗ ಅವರಿಗೆ ವಾರ್ ಘಟ್ಟಿಂಗ್ ಬೇಸಿಸ್ ಮೇಲೆ ಇಂಥ ಕಡೆ ವ್ಯವಸ್ಥೆ ಮಾಡಲು ನಾನು ಹೇಳುತ್ತೇನೆ. ಸೆಷನ್ ಮುಗಿದ ಮೇಲೆ ನಾನು ತಕ್ಷಣ ಹೋಗಿ ಅದರ ವ್ಯವಸ್ಥೆ ಮಾಡುತ್ತೇನೆ.

9. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ: ಸರ್ಕಾರ ಕೃಷಿಕರ ಪರ ಎಂದು ಹೇಳುತ್ತಿದೆ. ಆದರೆ ನಮ್ಮ ಊರಿನಲ್ಲಿ ಕೃಷಿಕರ ಬೆನ್ನು ಮುರಿದುಹಾಕಿದ್ದಾರೆ. ನದಿ ನೀರು ಬಳಕೆದಾರರು ಹಾಗೂ ವಿದ್ಯುತ್ ಬಳಕೆದಾರರು ಸೇರಿ ಮೆರವಣಿಗೆ ಮಾಡಿ ಮನವಿಯನ್ನೆಲ್ಲಾ ಕೊಟ್ಟಿದ್ದರು. ಕೆ.ಇ.ಬಿ.ಗೆ ಮನವಿ ಕೊಡಲು ಬಂದಾಗ ಪೊಲೀಸರು ಏಕಾಏಕಿ ಲಾಠಿಚಾರ್ಜ್ ಮಾಡಿ 15 ಮಂದಿಗೆ ಪೆಟ್ಟಾಗಿದೆ. ಆದರೆ ಪೆಟ್ಟು ತಿಂದವರೂ ರೈತರು, ಕೇಸು ಹಾಕಿದ್ದೂ ರೈತರ ಮೇಲೆ, ಏಕೆಂದರೆ ಸಾರ್ವಜನಿಕ ಸ್ವತ್ತು ಹಾಳುಮಾಡಿದ್ದಾರೆಂದು, ಅದರ ಸಿ.ಡಿ. ನನ್ನಲ್ಲಿದೆ, ಉದಯ ಟಿ.ವಿ. ಯವರು ಮಾಡಿರುವ ಕ್ಯಾಸೆಟ್ ಇದೆ, ಆ ಸಿ.ಡಿ.ಯಲ್ಲಿ ಸರಿಯಾಗಿ ಕಾಣುತ್ತಿದೆ, ಗೇಟು ಪೊಲೀಸ್‌ನವರೇ ಎತ್ತಿದಾಗ ಪೊಲೀಸ್‌ನವರ ಮೇಲೆ ಗೇಟು ಬಿದ್ದು ಅವರಿಗೆ ಗಾಯವಾದದ್ದು, ಆದರೆ ರೈತರ ಮೇಲೆ ಕೇಸು ಹಾಕಿದ್ದಾರೆ. ಮಾನವ ಹಕ್ಕು ಆಯೋಗಕ್ಕೆ ರೈತರು ಹೋಗಿದ್ದಾರೆ. ಅದರ ಬಗ್ಗೆ ಸರ್ಕಾರದ ಗಮನಸೆಳೆಯುತ್ತಿದ್ದೇನೆ.

ಶ್ರೀ ಬಿ. ನಾಗರಾಜ ಶೆಟ್ಟಿ (ಬಂಟ್ವಾಳ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು, ರೈತರ ಮೇಲೆ ನಾವು ಮಾಡಿದಂತಹ ಎಲ್ಲಾ ಕೇಸ್‌ಗಳನ್ನು ವಿತ್‌ಡ್ರಾ ಮಾಡುತ್ತೇವೆಂದು ಹೇಳಿದರು, ಅದರ ಬಗ್ಗೆ ಸರ್ಕಾರ ಒಂದು ಕ್ಲ್ಯಾರಿಫಿಕೇಷನ್ ಕೊಟ್ಟರೆ ಒಳ್ಳೆಯದು. ಏಕೆಂದರೆ ನೂರಾರು ಬಡರೈತರ ಮೇಲೆ ಕೇಸ್ ದಾಖಲಾಗಿದೆ. ಬಂಟ್ವಾಳ ಪೊಲೀಸ್ ಸ್ಟೇಷನ್‌ನಲ್ಲಿ ಈ ಕೇಸ್ ಇದೆ. ಇದರ ಬಗ್ಗೆ ಸರ್ಕಾರ ಮಾಹಿತಿ ಕೊಡುವುದು ಒಳ್ಳೆಯದು.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ: ಇನ್ನು ಅರಣ್ಯ ಒತ್ತುವರಿ ಬಗ್ಗೆ ಹೇಳಬೇಕೆಂದರೆ, ಅರಣ್ಯ ಅಕ್ರಮವಾಗಿ ಒತ್ತುವರಿ ಆಗುತ್ತಿರುವುದು ನಕ್ಸಲೈಟ್ ಬರುವುದಕ್ಕೆ ಕಾರಣ ಎಂದು ಹೇಳುತ್ತಿದ್ದಾರೆ. 25–50 ವರ್ಷಗಳ ಹಿಂದೆ ಅರಣ್ಯ ಒತ್ತುವರಿ ಮಾಡುವಾಗ ಈ ಅರಣ್ಯ ಇಲಾಖೆ ಎಲ್ಲಿ ಹೋಗಿತ್ತು? ಇವತ್ತಾದರೂ ಅಷ್ಟೆ, ಯಾರಾದರೂ ಬಂದು ಶಿರಾಡಿ ಘಾಟಿಯಲ್ಲಿ ನೋಡಿದರೆ, ಘಾಟಿಯ ಒಳ ಭಾಗದಲ್ಲೆಲ್ಲಾ ಗಾಂಜಾವನ್ನು ಬೆಳೆಸುತ್ತಿದ್ದಾರೆ. ಯಾವ ಅಧಿಕಾರಿಗಳೂ ಅವರ ಬಗ್ಗೆ ಮಾತನಾಡುತ್ತಿಲ್ಲ. ಎಲ್ಲಾದರೂ ಕೇರಳ–ಕರ್ನಾಟಕ ನನ್ನ ಕ್ಷೇತ್ರದ ಗಡಿ ಒಳಗೆ ಮಾರ್ಗ ರಿಪೇರಿ ಮಾಡಲಿಕ್ಕೆ ಯಾರೋ ಹಾರೆ ಗುದ್ದಲಿಗಳನ್ನು ಹಿಡಿದುಕೊಂಡು ಹೋದರೆ ಅಧಿಕಾರಿಗಳು ಬರುತ್ತಿದ್ದಾರೆ. ಹಾಗಿರುವಾಗ ಈ ಒತ್ತುವರಿ ಮಾಡಿದಾಗ ಅವರು ಎಲ್ಲಿ ಹೋಗಿದ್ದರು? ಇವತ್ತು ಇಷ್ಟು ವರ್ಷಗಳಿಂದ ಆ ಭೂಮಿಯೊಂದಿಗೆ ಸಂಬಂಧವನ್ನು ಇಟ್ಟಂತಹ ಜನರಿಗೆ, ಕೇರಳದಲ್ಲಿ ಆ್ಯಂಟನಿ ಸರ್ಕಾರ ಇದ್ದಾಗ ಅವರು ಈ ಒತ್ತುವರಿ ಮಾಡಿದ ಜಾಗದಷ್ಟು ವಯನಾಡಿನಲ್ಲಿ ಕೊಟ್ಟು ಇದಕ್ಕೆ ಪರಿಹಾರ ಕಂಡು ಕೊಂಡಿದ್ದಾರೆ. ನಮ್ಮ ಸರ್ಕಾರವೂ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಹೇಳಬೇಕೆಂದರೆ, ದಯಮಾಡಿ ನಮ್ಮ ಸಂಸ್ಕೃತಿ ಉಳಿಯಬೇಕಾಗಿದೆ. ಮೊನ್ನೆ ಸದನದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಬಗ್ಗೆ ಗಲಾಟೆ ಬಂದಿತು. ಕೇರಳದಲ್ಲಿ ಇಂಗ್ಲೀಷ್ ಪ್ರತಿಯೊಬ್ಬರೂ ಮಾತನಾಡುತ್ತಾರೆ. ಆದರೆ ಅವರ ಅಭಿಮಾನ ಎಷ್ಟು ಎಂದರೆ, ಅವರು ಅಮೇರಿಕಾದಲ್ಲಿದ್ದರೂ ಮನೆಯೊಳಗೆ ಅವರು ಮಲೆಯಾಳಂ ಮಾತನಾಡುತ್ತಾರೆ. ನಾವು ಕನ್ನಡ–ಇಂಗ್ಲೀಷ್ ಎಂದು ಹೇಳುವ ಮೊದಲು ಪ್ರಥಮವಾಗಿ ನಾವೆಲ್ಲರೂ ನಮ್ಮ ಮನೆಯೊಳಗೆ ನಮ್ಮ ನಮ್ಮ ಮಕ್ಕಳಿಗೆ ಕನ್ನಡ ಮಾತು ಕಲಿಸಿದಾಗ ಶಾಲೆಯಲ್ಲಿ ಇಂಗ್ಲೀಷ್ ಇದ್ದರೂ ಕನ್ನಡ ಇದ್ದರೂ ಕನ್ನಡ ಉಳಿಯುತ್ತದೆ. ಕನ್ನಡ ಉಳಿಸುವುದರ ಜೊತೆಗೆ ಕನ್ನಡದ್ದೇ ಆದ ಸಂಸ್ಕೃತಿಯನ್ನು ನಮ್ಮ ಜೀವನದಲ್ಲಿ ಎಲ್ಲರೂ ಸೇರಿಸೋಣ ಎಂದು ಹೇಳಿ, ಸರ್ಕಾರ 33 ಪರ್ಸೆಂಟ್ ಮಹಿಳೆಯರಿಗೆ ಅವಕಾಶ ಕೊಟ್ಟು ಇಲ್ಲಿ ಇವತ್ತು ಎಲ್ಲರನ್ನೂ ಹೋಗುವವರನ್ನು ನಿಲ್ಲಿಸಿ ನಿಲ್ಲಿ ಕೋರಂ ಇಲ್ಲ ಎಂದು ಹೇಳುವಂತಹ ವ್ಯವಸ್ಥೆ ಆಗುವ ಬದಲು ಮೊದಲು ಮಹಿಳೆಯರಿಗೆ ಶೇಕಡ 33 ಅವಕಾಶ ಕೊಟ್ಟು, 72 ಜನ ಮಹಿಳೆಯರಾದರೂ ಇದ್ದು ಈ ಕೋರಂನ್ನು ಶಾಸನ ಸಭೆಯಲ್ಲಿ ಮಾಡುವುದಕ್ಕೆ ಸರ್ಕಾರ ಅನುಮತಿ ಕೊಡುವುದಕ್ಕೆ ತಾವು ಕೃಪೆ ಮಾಡಬೇಕೆಂದು, ಹೇಳಿ ನಿಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

ಶ್ರೀ ಹಾಲಪ್ಪ ಹೆಚ್.: ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ನಾನು ಇಂಧನ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರು ಮೇಲೆ ಕೂತಿದ್ದಾರೆ, ಮಾತನಾಡುವವರು ಒನ್ ಸೈಡ್ ಇದ್ದಾರೆ. ಇದು ಏನೂ ನನಗೆ ಅರ್ಥವಾಗುತ್ತಿಲ್ಲ.

ಛೇರ್ಮನ್: ಪಟ್ಟಿಯಲ್ಲಿ ಹೆಸರು ಇದೆ.

ಶ್ರೀ ಡಿ.ಎನ್. ಜೀವರಾಜ್: ಅಧ್ಯಕ್ಷರೆ, ಯಾರೂ ಇಲ್ಲ, ಅವರಿಗೆ ಬೆಳಿಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ಲೆಕ್ಕ ಹಾಕಿದರೆ ಕೋರಂ ಕೂಡ ಇಲ್ಲ.

ಛೇರ್ಮನ್: ಮಾತನಾಡಲಿ. ಒಂಬತ್ತು ಗಂಟೆಯವರೆಗೆ ಸಮಯ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬೆಳಿಗ್ಗೆ ಮಾತನಾಡಿದರೆ ಅದಕ್ಕೆ ಮಹತ್ವ ಬರುತ್ತದೆ. ಈಗಾಗಲೇ 8.30 ಗಂಟೆಯಾಗಿದೆ, ನಾಳೆ ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭವಾಗಲಿ, ಮೂರು ಗಂಟೆಯವರೆಗೆ ಚರ್ಚೆಯಾಗಲಿ, ಆ ಮೇಲೆ ಬೇಕಾದರೆ ರಿಪ್ಲೆ ಕೊಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಭೆಯನ್ನು ಮುಂದಕ್ಕೆ ಹಾಕಿ; ಕೋರಂ ಇಲ್ಲ. ಕೋರಂ ನಾವು ಕರೆಯುವುದಕ್ಕೆ ಹೋಗಬಾರದು.

ಛೇರ್ಮನ್: ಈಗ ಸಭೆಯನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದೂಡುತ್ತಿದ್ದೇನೆ. (ಸದನವು ರಾತ್ರಿ 8 ಗಂಟೆ 32 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 28–7–2005 ರ ಗುರುವಾರದಂದು ಬೆಳಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು.)